ವಿಶ್ವವಾಣಿ

## ಸಂಪಾದಕೀಯ

### ಇದು ಲೋಕಾ ಭಿನ್ನರುಚಿ!

‘ಲೋಕೋ ಭಿನ್ನ ರುಚಿಃ’ ಎಂಬುದೊಂದು ಆಯೋಕ್ತಿ. ಆದರೆ ರಾಜ್ಯದ ವಿವಿಧೆಡೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, 13 ಸರಕಾರಿ ಅಧಿಕಾರಿಗಳ ಮನೆ, ಕಚೇರಿ ಸೇರಿದಂತೆ 62 ನೆಲೆಗಳಲ್ಲಿ ಕೋಟ್ಯಂತರ ರುಪಾಯಿ ಮೌಲ್ಯದ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ತನ್ಮೂಲಕ, ದಾಳಿಗೊಳಗಾದವರಿಗೆ ‘ಲೋಕಾ’ ಭಿನ್ನರುಚಿಯನ್ನೇ ತೋರಿಸಿದೆ. ದಾಳಿಯ ವೇಳೆ ಅಪಾರ ಪ್ರಮಾಣದ ನಗದು, ಚಿನ್ನ-ಬೆಳ್ಳಿ ಆಭರಣಗಳು, ವಿದೇಶಿ ಉಡುಗೊರೆ, ಮೊಬೈಲ್ ಫೋನ್, ನಿವೇಶನ ಮತ್ತು ಫಾರ್ಮ್‌ಹೌಸ್‌ಗಳ ಖರೀದಿಯ ದಾಖಲೆಪತ್ರಗಳು ಪತ್ತೆಯಾಗಿವೆ ಮತ್ತು ಹೀಗೆ ದಾಳಿಗೆ ಒಳಗಾದವರಲ್ಲಿ ಸಹಾಯಕ ಎಂಜಿನಿಯರ್, ಗ್ರಾಮ ಪಂಚಾಯಿತಿ ಪಿಡಿಒ, ಹೆಚ್ಚುವರಿ ಡಿಸಿ, ಅರಣ್ಯ ವಲಯದ ಅಧಿಕಾರಿ ಹೀಗೆ ವಿವಿಧ ಸ್ತರದ ‘ಸರಕಾರಿ ಸೇವಕರು’ ಸೇರಿದ್ದಾರೆ ಎಂಬುದು ಲಭ್ಯಮಾಹಿತಿ. ‘ಜನಸೇವೆಯೇ ಜನಾರ್ದನನ ಸೇವೆ’ ಎಂಬ ಮಾತೇ ಧ್ಯೇಯವಾಕ್ಯವಾಗಬೇಕಿದ್ದ ಇಂಥವರಲ್ಲಿ ಇಂಥದೊಂದು ಸಂಪತ್ತು ಸಂಗ್ರಹಣೆಯ ಚಿತ್ತಸ್ಥಿತಿ ರೂಪುಗೊಂಡಿದ್ದಾದರೂ ಹೇಗೆ? ಇವರ ಧಾರ್ಷ್ಟ್ಯ ಎಂಥದ್ದು? ಎಂದು ಅಚ್ಚರಿಯಾಗುತ್ತದೆ. ಹೀಗೆ ಗಂಟುಮಾಡುವ ಧೋರಣೆ ಇರುವವರು ನಿಜಾರ್ಥದಲ್ಲಿ ಜನಸೇವೆಗೆ ಮನಸ್ಸು ಮಾಡಿಯಾರೇ? ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ. ‘ಅಕ್ರಮ ಸಂಪಾದನೆ ಅಮೇಧ್ಯಕ್ಕೆ ಸಮ’ ಎಂದಿದ್ದಾರೆ ಮಹಾತ್ಮರೊಬ್ಬರು. ಪರಿಶ್ರಮದ ದುಡಿಮೆಯಿಂದ ಸಂಪಾದಿಸಿಕೊಂಡ ಹಣ ಮಾತ್ರವೇ ನಮ್ಮದು, ಅದರಿಂದ ದಕ್ಕುವ ಅನ್ನ ಮಾತ್ರವೇ ಮೈಗೆ ಹತ್ತುವುದು ಎಂಬ ಸರಳಸತ್ಯವನ್ನು ಇಂಥವರು ಮನಗಾಣುವುದು ಯಾವಾಗ? ಇವರ್‍ಯಾರೂ ನಿರಕ್ಷರ ಕುಕ್ಷಿಗಳಲ್ಲ ಎಂಬುದು ನಿಮ್ಮ ಗಮನಕ್ಕೆ. ಅಂದರೆ, ಸಾಕ್ಷರರಾಗಿದ್ದೂ ಇವರು ಅಕ್ರಮ ಸಂಪತ್ತಿನ ಸಂಗ್ರಹಣೆಯಲ್ಲಿ ತೊಡಗಿದ್ದರೆಂದರೆ, ಇವರು ಕಲಿತಿದ್ದು ಸಾಧನೆಯೆಡೆಗಿನ ಮಾರ್ಗವನ್ನೋ, ಅಕ್ರಮ ಸಂಪಾದನೆಯೆಡೆಗಿನ ದುರ್ಮಾರ್ಗವನ್ನೋ? ಇಂಥವರು ಮುಂದಿನ ಪೀಳಿಗೆಗೆ ರವಾನಿಸುವ ಸಂದೇಶವೇನು? ಸಿರಿವಂತರಾಗುವುದು ಬೇಡ ಎಂಬುದಾಗಿ ಯಾವುದೇ ದೇಶದ ಸಂಸ್ಕೃತಿ ಯಾವತ್ತೂ ಹೇಳಿಲ್ಲ; ಆದರೆ ಸಿರಿವಂತಿಕೆಯ ಮಾರ್ಗ ಯುಕ್ತವಾಗಿರಬೇಕು. ದುಡಿಮೆಗೆ ಇಳಿಯುವವರು ಈ ಸರಳಸತ್ಯವನ್ನು ಅರಿತರೆ ಒಳಿತು.

## ಸೊಂಪಾದಕೀಯ

### ಕಪ್ಪು ಕಾಣಿಕೆಗೆ ಫ್ಯಾನ್ಸ್ ಹಂಬಲ

ಏಪ್ರಿಲ್ ಬಂತು ಅಂದ್ರೆ ಮಕ್ಕಳಿಗೆ ಪರೀಕ್ಷೆ ಮುಗಿದು ರಜೆ ಶುರುವಾಗೋ ಕಾಲ. ಅದನ್ನು ಬೇಸಗೆ ರಜೆ ಅಂತ ಕರೆಯೋದು ವಾಡಿಕೆ. ಆದರೆ, ಆಗಿನ ಕಾಲದ ಬೇಸಗೆ ರಜೆ, ದಸರಾ ರಜೆಗಳಿಗೆ ಈಗೀಗ ಬೇರೆ ಹೆಸರುಗಳನ್ನಿಡುವ ಪರಿಪಾಠ ಆರಂಭ ಆಗಿದೆ. ಹಾಗಾಗಿ ಈಗಿನ ಕಾಲದ ಮಕ್ಕಳಿಗೆ ಬೇಸಗೆ ರಜೆ ಐಪಿಎಲ್ ರಜೆ ಆಗಿ ಪರಿಣಮಿಸಿದೆ ಅಂದ್ರೆ ತಪ್ಪಿಲ್ಲ. ಮಕ್ಕಳು ಈಗ ರಜೆ ಬಂತು ಅಂತ ಅಜ್ಜಿ ಮನೆಗೆ ಹೋಗೋ ಅಭ್ಯಾಸ ಬಿಟ್ಟುಹೋಗಿದೆ. ಮೊಬೈಲ್‌ಗಳಿಗೆ ಅಡಿಕ್ಟ್ ಆಗಿರುವ ಅವರಿಗೆ, ‘ಅಜ್ಜಿ ಮನೆಗೆ ಹೋದ್ರೆ ಕರೆಂಟ್ ಇರುತ್ತೋ ಇಲ್ವೋ, ಇಂಟರ್‌ನೆಟ್ ಇರುತ್ತೋ ಇಲ್ವೋ?’ ಎಂಬ ಚಿಂತೆ. ಹಾಗಾಗಿ ಅವರು ದೊಡ್ಡ ಊರುಗಳನ್ನು ಬಿಟ್ಟು ಹಳ್ಳಿ ಕಡೆ ಮುಖ ಮಾಡುತ್ತಿಲ್ಲ. ಈಗ ಅವರ ಹಾಟ್‌ಲಿಸ್ಟಿಗೆ ಐಪಿಎಲ್ ಕ್ರಿಕೆಟ್ ಕೂಡಾ ಸೇರಿಕೊಂಡಿದೆ. ಇನ್ನು ದೊಡ್ಡವರ ವಿಷಯಕ್ಕೆ ಬಂದ್ರೆ, ಎಂದಿನಂತೆ ಆರ್‌ಸಿಬಿ ಅಭಿಮಾನಿಗಳು ‘ಈ ಸಲ ಕಪ್ ನಮ್ದೇ’ ಅನ್ನೋ ಪುರಾತನ ಕಾಲದ ಸಂಪ್ರದಾಯವನ್ನು ಮುಂದುವರಿಸುತ್ತಿದ್ದಾರೆ. ಅದ್ಯಾಕೋ ಇಷ್ಟು ವರ್ಷ ವನವಾಸ ಮಾಡಿದರೂ ಆರ್‌ಸಿಬಿಗೆ ಮಾತ್ರ ಕಪ್ ಎತ್ತುವ ಭಾಗ್ಯ ಸಿಕ್ಕಿಲ್ಲ. ಎಷ್ಟೇ ದೊಡ್ಡ ಅಭಿಮಾನಿ ಬಳಗವನ್ನು ಹೊಂದಿದ್ದರೂ ಕಪ್ಪು ಗೆಲ್ಲದೇ ಇರೋದು ಮಾತ್ರ ದೊಡ್ಡ ಕಪ್ಪು ಚುಕ್ಕೆ ಆಗಿಯೇ ಉಳಿದುಕೊಂಡಿದೆ. ಈ ಬ್ಲಾಕ್ ಮಾರ್ಕ್ ಅನ್ನು ಹೋಗಲಾಡಿಸಿ ಲ್ಯಾಂಡ್ ಮಾರ್ಕ್ ಅನ್ನಿಸೋ ಸಾಧನೆ ಮಾಡಬೇಕು ಅಂತ ಆರ್‌ಸಿಬಿ ತಂಡ ಎಷ್ಟೇ ಪ್ರಯತ್ನಪಟ್ಟರೂ, ಅದೇನೇ ಉತ್ತಮ ಪ್ರದರ್ಶನ ಕೊಟ್ಟರೂ ಅದು ಕೆಲವು ಪಂದ್ಯಗಳನ್ನು ಗೆಲ್ಲುವುದಕ್ಕೆ ಸೀಮಿತ ಆಗುತ್ತಿದೆಯೇ ಹೊರತು ಕಪ್ ಗೆಲ್ಲಲು ಸಹಾಯ ಮಾಡುತ್ತಿಲ್ಲ. ಅಭಿಮಾನಿಗಳ ಪ್ರಕಾರ ಅನೇಕ ಪಂದ್ಯಗಳಲ್ಲಿ ಬಾಯಿಗೆ ಬರಿಸಿ ಗೆಲ್ಲುವ ಆರ್‌ಸಿಬಿ ತಂಡಕ್ಕೆ, ಬಾಯಿಗೆ ಬಂದ ಕಪ್ ಕೈಯಿಗೆ ಬರಲಿಲ್ಲ ಅನ್ನೋ ರೀತಿಯ ಸಂದರ್ಭಗಳೇ ಹೆಚ್ಚಾಗಿವೆ. ಆದರೆ ಅಭಿಮಾನಿಗಳಿಗೆ ಮಾತ್ರ ತಮ್ಮ ನೆಚ್ಚಿನ ತಂಡದ ಮೇಲೆ ಭರವಸೆ ಕಮ್ಮಿ ಆಗಿಲ್ಲ. ಕಪ್ ಮೇಲೆ ಕೈ ಇರಿಸುವ ಕಾಲ ಈ ಪಂದ್ಯಾವಳಿಯಲ್ಲಾದ್ರೂ ಬರುತ್ತೆ ಅನ್ನೋ ನಂಬಿಕೆಯಲ್ಲಿ ಅಭಿಮಾನಿಗಳು ಈ ಬಾರಿಯ ಐಪಿಎಲ್ ನಲ್ಲಿ, ಮೊದಲ ಪಂದ್ಯ ಸೋತು ಎರಡನೇ ಪಂದ್ಯ ಗೆದ್ದಿರುವ ಆರ್‌ಸಿಬಿ ಇಂದು ಕೋಲ್ಕತ್ತಾ ವಿರುದ್ಧ ಆಡಲಿರುವ ಪಂದ್ಯವನ್ನು ಎದುರು ನೋಡುತ್ತಿದ್ದಾರೆ.

## ಸಂಪಾದಕರ ಸದ್ಯಶೋಧನೆ

### ದೇಶದ ಪ್ರಪ್ರಥಮ ಮತದಾರ

ಯಾರು ಆ ಶ್ಯಾಮ್ ಸರನ್ ನೇಗಿ? ಅವರ ಹೆಸರನ್ನು ಎಷ್ಟು ಮಂದಿ ಕೇಳಿದ್ದಾರೋ ಗೊತ್ತಿಲ್ಲ. ಆದರೆ ಆತ ಸ್ವತಂತ್ರ ಭಾರತದ ಪ್ರಪ್ರಥಮ ಮತದಾರ ಅಂದ್ರೆ ಅಚ್ಚರಿಯಾದೀತು. 1951ರಲ್ಲಿ ನಡೆದ ಮೊದಲ ಲೋಕಸಭಾ ಚುನಾವಣೆಯಲ್ಲಿ ನೇಗಿ ಮೊದಲು ಮತಗಟ್ಟೆಗೆ ಹೋಗಿ ಮತ ಚಲಾಯಿಸಿದರು. ಹಿಮಾಚಲ ಪ್ರದೇಶದ ಕಿನೌರ್ ಜಿಲ್ಲೆಯ ಕಲ್ಪಾ ಎಂಬ ಊರಿನವರಾದ ನೇಗಿಯವರು, ಮತದಾನ ಆರಂಭವಾಗುತ್ತಿದಂತೆ ಮೊದಲು ಸಾಲಿನಲ್ಲಿ ನಿಂತಿದ್ದರು. ಮೊದಲ ಚುನಾವಣೆ 1952ರಲ್ಲಿ ನಡೆದರೂ, ಹಿಮಾಚಲ ಪ್ರದೇಶದಲ್ಲಿ ಮಾತ್ರ ಆರು ತಿಂಗಳು ಮೊದಲೇ ಚುನಾವಣೆ ನಡೆದಿತ್ತು. ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಪ್ರತಿಕೂಲ ವಾತಾವರಣವಿರುವುದರಿಂದ, ವಿಪರೀತ ಹಿಮಪಾತವಾಗುವ ಸಾಧ್ಯತೆ ಇರುವುದರಿಂದ, ಆ ಸಮಯದಲ್ಲಿ ಚುನಾವಣೆಯನ್ನು ನಡೆಸಿದರೆ ಮತದಾನದಲ್ಲಿ ಭಾಗವಹಿಸುವುದು ಕಷ್ಟವಾಗುವುದರಿಂದ, ಆರು ತಿಂಗಳು ಮೊದಲೇ ಚುನಾವಣೆಯನ್ನು ಏರ್ಪಡಿಸಲಾಗಿತ್ತು. ಮೂಲತಃ ಶಾಲಾ ಶಿಕ್ಷಕರಾಗಿದ್ದ ನೇಗಿಯವರು, ಮತಗಟ್ಟೆ ಅಧಿಕಾರಿಗಳ ಪೈಕಿ ಒಬ್ಬರಾಗಿದ್ದರು. ಮತದಾನ ಆರಂಭವಾಗುತ್ತಿದ್ದಂತೆ, ಮೊದಲು ಮತದಾನ ಮಾಡಿ, ‘ಭಾರತದ ಪ್ರಪ್ರಥಮ ಮತದಾರ’ ಎಂಬ ಅಭಿದಾನಕ್ಕೆ ಪಾತ್ರರಾದರು. 1951ರಿಂದ ಶುರುಮಾಡಿ ಅವರು ತಮ್ಮ 105ನೇ ವಯಸ್ಸಿನಲ್ಲಿ 2022ರಲ್ಲಿ ನಿಧನರಾಗುವ ತನಕ ಪ್ರತಿ ಚುನಾವಣೆಯಲ್ಲೂ ಮತ ಹಾಕಿದ್ದಾರೆ. ಅದು ಲೋಕಸಭಾ ಚುನಾವಣೆಯೇ ಆಗಿರಲಿ, ಸ್ಥಳೀಯ ಸಂಸ್ಥೆಗಳ ಚುನಾವಣೆಯೇ ಆಗಿರಲಿ, ನೇಗಿ ಮತದಾನ ಮಾಡುವುದನ್ನು ಮರೆಯುತ್ತಿರಲಿಲ್ಲ. ಅವರು ಪ್ರಥಮ ಮತದಾರರಷ್ಟೇ ಅಲ್ಲ, ದೇಶದ ಅತ್ಯಂತ ಹಿರಿಯ ಮತದಾರ ಎಂದೂ ಕರೆಯಿಸಿಕೊಂಡಿದ್ದರು. 34ನೇ ಸಲ ಚುನಾವಣೆಯಲ್ಲಿ ಮತ ಹಾಕಿದ ಮೂರು ದಿನಗಳ ನಂತರ ಅವರು 2022ರ ನವೆಂಬರ್ 5ರಂದು ಅಸು ನೀಗಿದರು. ಭಾರತ ಸರಕಾರ ಅವರ ಅಂತ್ಯಕ್ರಿಯೆಯನ್ನು ಸಕಲ ಸರಕಾರಿ ಗೌರವಗಳೊಂದಿಗೆ ನೆರವೇರಿಸಿತ್ತು. 2010ರಲ್ಲಿ ಭಾರತದ ಚುನಾವಣಾ ಆಯೋಗದ ವಜ್ರ ಮಹೋತ್ಸವದ ಸಂದರ್ಭದಲ್ಲಿ ಆಯೋಗದ ಅಂದಿನ ಚುನಾವಣಾ ಆಯುಕ್ತರಲ್ಲಿ ಒಬ್ಬರಾದ ನವೀನ ಚಾವ್ಲಾ ಖುದ್ದಾಗಿ ನೇಗಿಯವರ ನಿವಾಸಕ್ಕೆ ತೆರಳಿ ಸನ್ಮಾನಿಸಿದ್ದರು. ‘ಆ ದಿನಗಳಲ್ಲಿ ಚುನಾವಣೆ ಅಂದ್ರೆ ಜಾತ್ರೆಯ ಸಂಭ್ರಮವಿರುತ್ತಿತ್ತು. ದೇಶದ ಪ್ರತಿ ಊರಿನಲ್ಲೂ ಹಬ್ಬದ ವಾತಾವರಣವಿರುತ್ತಿತ್ತು. ಆದರೆ ಈ ದಿನಗಳಲ್ಲಿ ಚುನಾವಣೆ ಬಂದಿದ್ದೇ ಗೊತ್ತಾಗುವುದಿಲ್ಲ. ಹಾಗಂತ ಆಗಿನ ದಿನಗಳಿಗಿಂತ ಈಗ ಹಣ ಹೆಚ್ಚು ಖರ್ಚಾಗುತ್ತಿದೆ. ಚುನಾವಣಾ ಆಯೋಗ ಚುನಾವಣೆಯನ್ನು ನೀರಸಗೊಳಿಸಿಬಿಟ್ಟಿದೆ. ಈಗಿನ ಚುನಾವಣೆಯಲ್ಲಿ ಸಂಭ್ರಮ ಹೊರಟು ಹೋಗಿದೆ. ಅಂತ್ಯಸಂಸ್ಕಾರದಂತೆ ಭಾಸವಾಗುತ್ತದೆ ’ ಎಂದು ನೇಗಿ ಆ ಸಂದರ್ಭದಲ್ಲಿ ಹೇಳಿದ್ದರು. 2014ರಲ್ಲಿ ಹಿಮಾಚಲ ಪ್ರದೇಶ ಚುನಾವಣಾ ಆಯೋಗವು ನೇಗಿಯವರನ್ನು ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಿತ್ತು. ಮತದಾರರಲ್ಲಿ ಜಾಗೃತಿಯನ್ನುಂಟು ಮಾಡುವ ಕಾಯಕದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. ‘ಮತದಾನ ಅಂದ್ರೆ ಮತಗಳನ್ನು ದಾನ ಮಾಡುವುದಲ್ಲ, ನಮ್ಮ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವುದು. ಅದೊಂದು ಪರಮಪವಿತ್ರ ಕಾರ್ಯ. ಯಾವ ಕಾರಣಕ್ಕೂ ಮತದಾನದಲ್ಲಿ ಭಾಗವಹಿಸುವ ಅವಕಾಶವನ್ನು ತಪ್ಪಿಸಿಕೊಳ್ಳಬಾರದು’ ಎಂದು ನೇಗಿ ಹೇಳುತ್ತಿದ್ದರು. ಯಾರಾದರೂ ಮತದಾನದಲ್ಲಿ ಭಾಗವಹಿಸದಿರುವ ಸಂಗತಿ ಅವರಿಗೆ ಗೊತ್ತಾದರೆ ಅವರ ಮನೆಗೆ ಹೋಗಿ, ಮತದಾನದಲ್ಲಿ ಭಾಗವಹಿಸದೇ ಇದ್ದಿದ್ದು ಯಾಕೆ ಎಂಬ ಕಾರಣವನ್ನು ತಿಳಿದುಕೊಳ್ಳಲು ಬಯಸುತ್ತಿದ್ದರು. ಮತದಾರರಲ್ಲಿ ಜಾಗೃತಿಯನ್ನುಂಟು ಮಾಡಲು ‘ಗೂಗಲ್ ಇಂಡಿಯಾ’ ನೇಗಿಯವರ ಸೇವೆಯನ್ನು ಬಳಸಿಕೊಂಡಿತ್ತು.

# ಸದ್ಗುರು, ಇವರೇ ಅಲ್ಲವೇ ನಿಜ ಅರ್ಥದ ಜಗದ್ಗುರು?



ಶಿಶಿರ ಕಾಲ

ಶಿಶಿರ್ ಹೆಗಡೆ
shishirh@gmail.com

ಸದ್ಗುರು ಜಗ್ಗಿ ವಾಸುದೇವ್. ಇವರ ಪರಿಚಯದ ಅವಶ್ಯಕತೆ ಇಲ್ಲವೆಂದುಕೊಂಡಿದ್ದೇನೆ. ಸದ್ಗುರು ರೂಪಿಸಿರುವ ಹಲವು ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ‘ಇನ್ನರ್ ಎಂಜಿನಿಯರಿಂಗ್’ ಕೂಡ ಒಂದು. ಇದನ್ನು ಇಂಟರ್ನೆಟ್ ಮೂಲಕ ಪಡೆಯಬಹುದು. ಇದರಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. ಪ್ರತಿ ಅಧ್ಯಾಯಕ್ಕೆ ಎರಡರಿಂದ ಮೂರು ತಾಸು ಬೇಕು. ಕೊನೆಯ ಅಧ್ಯಾಯ ಸ್ವಲ್ಪ ದೀರ್ಘವಾದುದು. ಮೊದಲ ಆರು ಪಾಠಗಳು ಸೇರಿಸಿ ಸುಮಾರು 12-13 ತಾಸಿನಷ್ಟಾದರೆ ಕೊನೆಯ ಅಧ್ಯಾಯ, ಏಳನೆಯದು ಹನ್ನೆರಡು ತಾಸಿನದು, ಲೈವ್. ಈ ಕೊನೆಯ ಅಧ್ಯಾಯವನ್ನು ಮುಗಿಸಲು ವಾರಾಂತ್ಯದ ಎರಡು ದಿನ ಬೇಕು. ತೀರಾ ವ್ಯವಸ್ಥಿತವಾಗಿ ರೂಪಿಸಲ್ಪಟ್ಟ ಕಾರ್ಯಕ್ರಮ ಇದು. ಯೋಗ, ಅಧ್ಯಾತ್ಮ, ಕ್ರಿಯೆ ಇವೆಲ್ಲ ಇಂದಿನ ಜಮಾನಕ್ಕೆ ಹೊಂದಿಕೆಯಾಗುವಂತೆ ಪುನರ್ ಆವಿಷ್ಕರಿಸಿದ ಒಂದು ಪೂರ್ಣ ಪ್ಯಾಕೇಜ್. ನೀವು ಇನ್ನರ್ ಎಂಜಿನಿಯರಿಂಗ್‌ನಲ್ಲಿ ಭಾಗಿಯಾದ ಯಾರನ್ನೇ ಕೇಳಿ, ‘ಇದೊಂದು ಜೀವನ ಬದಲಾಯಿಸಬಲ್ಲ ಕಾರ್ಯಕ್ರಮ’ ಎಂದೇ ಹೇಳುವುದು. ಈ ಕಾರ್ಯಕ್ರಮವೇನೂ ಪುಣ್ಯ ಸಂಪಾದನೆಯ ಕೆಲಸವಲ್ಲ. ಪುಣ್ಯದಿಂದ ಜೀವನ ಬದಲಾಗುವುದೂ ಅಲ್ಲ, ಅಥವಾ ದೇವರಿಗೆ ಹತ್ತಿರವಾಗುವ ಏನೋ ಒಂದು ಸೀಕ್ರೆಟ್ ಅನ್ನು ಇಲ್ಲಿ ಹೇಳಿಕೊಡಲಾಗುವುದಿಲ್ಲ. ಇದೊಂದು ಆಧ್ಯಾತ್ಮಿಕ, ಆಂತರಿಕ ಬದಲಾವಣೆಯ ಪಯಣದ ಮೊದಲ ಹೆಜ್ಜೆ. ಈ ಕಾರ್ಯಕ್ರಮವು ನಾವು ಬದುಕನ್ನು ನೋಡುವ ರೀತಿಯನ್ನು ಬದಲಾಯಿಸಿ, ಜೀವನಕ್ಕೆ ಇನ್ನಷ್ಟು ಸ್ಪಷ್ಟತೆ ನೀಡುವುದರಿಂದ ಇದು ನಿಜ ಅರ್ಥದಲ್ಲಿ ಇನ್ನರ್ ಎಂಜಿನಿಯರಿಂಗ್. ನಮ್ಮ ವಿಚಾರ, ಆಚಾರಗಳಲ್ಲಿ ಸಾತ್ವಿಕ ಮತ್ತು ತೀರಾ ವ್ಯವಸ್ಥಿತ ಬದಲಾವಣೆ ತರಬಲ್ಲ ಒಂದು ದೀಕ್ಷೆ. ಭಾಗವಹಿಸಿದವರಿಗೆಲ್ಲ ಇದು ಸ್ಪಷ್ಟ ಅನುಭವಕ್ಕೆ ಬರುತ್ತದೆ.

ಆ್ಯಪಲ್ ಫೋನ್ ಕಂಪನಿ ಈಗ ನಾಲ್ಕು ವರ್ಷದ ಹಿಂದೆ ಒಂದು ಅಪ್ಲಿಕೇಶನ್ ಅನ್ನು ತನ್ನ ವಾಚ್‌ನಲ್ಲಿ ಬಿಡುಗಡೆ ಮಾಡಿತು. ಅದರ ಹೆಸರು Mindfulness. ಈ ಅಪ್ಲಿಕೇಶನ್ ಅನ್ನು ವಾಚಿನಲ್ಲಿ ಹಾಕಿಕೊಂಡರೆ ನಾವು ನಿರ್ಧರಿಸಿದ ಇಂತಿಷ್ಟು ತಾಸುಗಳಿಗೊಮ್ಮೆ ವಾಚ್ ನಮ್ಮನ್ನು ಎಚ್ಚರಿಸುತ್ತದೆ ಮತ್ತು ಒಂದಿಷ್ಟು ಸಮಯ ಧ್ಯಾನ ಮಾಡುವಂತೆ, ಸುಮ್ಮನೆ ಕುಳಿತು ನಮ್ಮ ಆಂತರ್ಯವನ್ನು, ಉಸಿರನ್ನು ಗ್ರಹಿಸುವಂತೆ ಪ್ರೇರೇಪಿಸಿ ಸೂಚನೆ ನೀಡುತ್ತದೆ. Guided Meditation. ಉಚ್ಛ್ವಾಸ ಮತ್ತು ನಿಶ್ವಾಸ ಸಮಯದಲ್ಲಿ ಕೈಗೆ ಕಟ್ಟಿರುವ ವಾಚ್ ಚಿಕ್ಕದಾಗಿ ಅಲುಗಿ (vibrate) ಉಸಿರಿನ ಮೇಲಿನ ನಿಯಮಿತತೆ ಸಾಧಿಸುವಲ್ಲಿ ಸಹಕರಿಸುತ್ತದೆ. ಅಮೆರಿಕದಲ್ಲಿ ಅರ್ಧದಷ್ಟು ವಯಸ್ಕರು, ಸುಮಾರು 14 ಕೋಟಿ ಮಂದಿ ಐಫೋನ್ ಬಳಸುತ್ತಾರೆ. ಇದರಲ್ಲಿ ಬಹುತೇಕರು ಆ್ಯಪಲ್ ವಾಚ್ ಕೂಡ ಹೊಂದಿರುತ್ತಾರೆ. ಇವತ್ತು ಅಮೆರಿಕದಲ್ಲಿ ಮಾರಾಟವಾಗುವ ಕೈಗಡಿಯಾರಗಳಲ್ಲಿ ಆ್ಯಪಲ್ ವಾಚ್‌ನದು ಮೊದಲ ಸ್ಥಾನ. ಆ್ಯಪಲ್ ವಾಚ್ ಬಳಸುವ ಶೇ. 55ರಷ್ಟು ಮಂದಿ ಪ್ರತಿದಿನ ಒಮ್ಮೆಯಾದರೂ Mindfulness ಅಪ್ಲಿಕೇಶನ್ ಅನ್ನು ತಮ್ಮ ವಾಚ್‌ನಲ್ಲಿ ಬಳಸುತ್ತಾರೆ ಎಂಬುದು ವರದಿ. ಅಂದರೆ ಇದೊಂದೇ ಲೆಕ್ಕದ ಪ್ರಕಾರ ಏನಿಲ್ಲವೆಂದರೂ ಸುಮಾರು ಏಳೆಂಟು ಕೋಟಿ ಅಮೆರಿಕನ್ನರು ನಿತ್ಯ ಕೆಲವು ನಿಮಿಷಗಳಾದರೂ ಆ್ಯಪಲ್ ವಾಚ್ ಬಳಸಿ ಧ್ಯಾನ ಮಾಡುತ್ತಾರೆ. ಈ ಲೆಕ್ಕಕ್ಕೆ ಹೊರತಾಗಿ ಧ್ಯಾನದಲ್ಲಿ ತೊಡಗುವ ಬಹುದೊಡ್ಡ ವರ್ಗವೇ ಇದೆ. ಇವೆಲ್ಲ ಸೇರಿಸಿದರೆ ಇನ್ನೊಂದಿಷ್ಟು ಕೋಟಿ ಅಮೆರಿಕನ್ನರು ಪ್ರತಿನಿತ್ಯ ಧ್ಯಾನದಲ್ಲಿ ತೊಡಗುತ್ತಾರೆ. ಏನಿದರರ್ಥ? ಅವರಿಗೆಲ್ಲ ಇದರಿಂದ ಏನೋ ಒಂದು ಸಮಾಧಾನ, ಪ್ರತಿಫಲ ಸಿಗುತ್ತಿದೆ ಎಂದಾಯಿತಲ್ಲವೇ?

ನಾನಿರುವ ಶಿಕಾಗೋದ ಸುತ್ತಮುತ್ತ ಏನಿಲ್ಲವೆಂದರೂ ಸುಮಾರು 20-30 ಹಿಂದೂ ದೇವಸ್ಥಾನಗಳಿವೆ. ಅದರಲ್ಲಿ HTGC- Hindu Temple of Greater Chicago ದೊಡ್ಡ ದೇವಸ್ಥಾನಗಳಲ್ಲಿ ಒಂದು. ಅಲ್ಲಿ ಪ್ರತಿ ಭಾನುವಾರ ಯೋಗ ಶಿಬಿರ ನಡೆಯುತ್ತದೆ. ಸುಮಾರು 50-60 ಮಂದಿ ಇಲ್ಲಿ ಬಂದು ಯೋಗಾಭ್ಯಾಸ ಮಾಡಿ ಹೋಗುತ್ತಾರೆ. ಮಜಾ ಏನು ಗೊತ್ತಾ? ಇಲ್ಲಿ ಯೋಗ ಕಲಿಸುವವರು ಭಾರತೀಯರಲ್ಲ, ಬಿಳಿಯ ಅಮೆರಿಕನ್ ಯೋಗಪಟುಗಳು. ಅವರಿಂದ ಭಾರತೀಯರು, ಜತೆಯಲ್ಲಿ ಇನ್ನೊಂದಿಷ್ಟು ಅಮೆರಿಕನ್ನರು ಹಠಯೋಗ ಕಲಿಯುವುದು! ಇಂದು, ಅದರಲ್ಲಿಯೂ ಕೊರೋನಾ ಕಾಲದ ನಂತರ ಎಲ್ಲಿಲ್ಲದ ಪ್ರಮಾಣದಲ್ಲಿ ಮಾನಸಿಕ ಸಮಸ್ಯೆಗಳು ಅಮೆರಿಕದಲ್ಲಿ (ಎಲ್ಲೆಡೆ) ಹೆಚ್ಚಿವೆ. ಆ ಕಾರಣಕ್ಕೆ ದಿನಕಳೆದಂತೆ ಹೆಚ್ಚು ಹೆಚ್ಚು ಅಮೆರಿಕನ್ನರು ಯೋಗ, ಧ್ಯಾನದೆಡೆಗೆ ವಾಲುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇದರಿಂದಾಗಿ ಎಲ್ಲೆಂದರಲ್ಲಿ ಯೋಗ ಸೆಂಟರ್‌ಗಳು ಕೂಡ ತಲೆಯೆತ್ತಿವೆ.

ಪಶ್ಚಿಮದ ದೇಶಗಳಲ್ಲಿ ಬಿಡಿ, ನಮ್ಮಲ್ಲಿಯೇ ಯೋಗ-ಧ್ಯಾನಗಳ ಬಗ್ಗೆ ಅದೆಷ್ಟೋ ತಪ್ಪು ಕಲ್ಪನೆಗಳಿವೆ. ಅದೆಷ್ಟೋ ಮಂದಿಗೆ ಧ್ಯಾನವೆಂದರೆ ಒಂದಿಷ್ಟು ಹೊತ್ತು ಏಕಾಗ್ರಚಿತ್ತವಾಗಿರುವುದು. ಯೋಗವೆಂದರೆ ಅದೊಂದು ರೀತಿಯ ವ್ಯಾಯಾಮ. ನಾವೆಲ್ಲ ಚಿಕ್ಕಂದಿನಿಂದಲೂ ಯೋಗ-ಧ್ಯಾನಗಳ ಉಪಯೋಗವನ್ನು ಕೇಳಿಕೊಂಡು ಬೆಳೆದಿದ್ದೇವೆ. ಮೊದಲಿನಿಂದಲೂ ಯೋಗ-ಧ್ಯಾನದ ಉಪಯೋಗ ಹೇಳಿದವರೇ ಜಾಸ್ತಿ. ಹೇಗೆ ಧ್ಯಾನಿಸಬೇಕೆಂದು ಹೇಳುವವರು ಕಡಿಮೆ. ಶಾಸ್ತ್ರೀಯವಾಗಿ, ವ್ಯವಸ್ಥಿತವಾಗಿ ತಿಳಿಯುವುದು ಹೇಗೆ ಎಂಬ ಪ್ರಶ್ನೆ ಬಹುಕಾಲ ಕಾಡಿದ್ದಿದೆ. ನಿತ್ಯ ಬದುಕಿನ ಜಂಜಾಟಕ್ಕೆ ಸಿಕ್ಕಿದ ಬಹುತೇಕರಿಗೆ ಇವೆಲ್ಲವನ್ನೂ ಶಾಸ್ತ್ರೀಯವಾಗಿ ಕಲಿಯುವುದು ಬಹಳ ಕಷ್ಟ. ಎಲ್ಲಿಯೋ ಯೋಗ ಶಿಬಿರಗಳಲ್ಲಿ ಭಾಗಿಯಾದರೂ ಅದನ್ನು ಮುಂದುವರಿಸಿಕೊಂಡು ಹೋಗುವಷ್ಟು ಒಳಮರ್ಮ ತಿಳಿಯುವುದಿಲ್ಲ. ಯೋಗಶಿಬಿರಗಳಲ್ಲಿ ಸರ್ಕಸ್ ಮಾಡಿ ಕೆಲವು ಆಸನಗಳನ್ನು ಕಲಿತರೂ, ದೇಹ ಬಾಗದೆ, ಕಷ್ಟವೆನ್ನಿಸಿ ಅದು ಕೆಲ ಕಾಲವೂ ಮುಂದುವರಿಯುವುದಿಲ್ಲ. ಇರುವ ಉದ್ಯೋಗ, ಸಂಸಾರವನ್ನು ಬಿಟ್ಟು ಯಾವುದೋ ಹಿಮಾಲಯದ ಸನ್ಯಾಸಿಯ ಬಳಿ ಹೋಗಿ ಕಲಿಯಲಿಕ್ಕೆ ಕೂಡ ಸಾಧ್ಯವಿಲ್ಲ. ಬದಲಾದ ಸಮಯದಲ್ಲಿ ಹೆಚ್ಚು ಜನರಿಗೆ ಇಂಥ ಜ್ಞಾನವನ್ನು ವ್ಯವಸ್ಥಿತವಾಗಿ ತಿಳಿಸಲು ಇದನ್ನು ಶಿಕ್ಷಣದ ಭಾಗವಾಗಿಸಬೇಕಿತ್ತು ಎಂದು ಅದೆಷ್ಟೋ ಬಾರಿ ಅನ್ನಿಸಿದ್ದಿದೆ. ಆದರೆ ಅದು ನಮ್ಮ ಇಂದಿನ ಜೊಳ್ಳು ಜಾತ್ಯತೀತ ವ್ಯವಸ್ಥೆಯಲ್ಲಿ ಸಾಧ್ಯವಿಲ್ಲ, ಅಮೆರಿಕನ್ನರಿಗೆ, ಪಾಶ್ಚಾತ್ಯರಿಗೆ ತಿಳಿದ ಇದರ ಮಜಕೂರು ನಮಗೆ ಗೊತ್ತಿಲ್ಲವಲ್ಲ ಎಂದು ಅದೆಷ್ಟೋ ಬಾರಿ ಅನ್ನಿಸಿದ್ದಿದೆ. ಒಟ್ಟಾರೆ ಬದಲಾದ ಸಮಯಕ್ಕೆ ತಕ್ಕಂತೆ ಇದೆಲ್ಲವನ್ನು ಕಲಿಯುವ ವ್ಯವಸ್ಥೆಯ ಕೊರತೆ ಬಹುಕಾಲದಿಂದ ಇದೆ. ಆ ಕೊರತೆಯನ್ನು ನೀಗಿಸುವಲ್ಲಿ ಸದ್ಗುರುಗಳ ಕಾರ್ಯ ನಿಜವಾಗಿಯೂ ಶ್ಲಾಘನೀಯ. ನೀವು ಭಾರತದಲ್ಲಿದ್ದರೆ ಇನ್ನರ್ ಎಂಜಿನಿಯರಿಂಗ್ ಕೋರ್ಸ್ ಅನ್ನು ಕೇವಲ ಎರಡು ಹೋಟೆಲ್ ಊಟದ ಖರ್ಚಿನಲ್ಲಿ, ನಾಲ್ಕು ನೂರು ರುಪಾಯಿಯಲ್ಲಿ ಪಡೆದು ಪೂರೈಸಬಹುದು. ಇದಕ್ಕೆ ನೀವು ಎಲ್ಲಿಗೋ, ವಾರಗಟ್ಟಲೆ ಮನೆಬಿಟ್ಟು ಹೋಗಬೇಕೆಂದಿಲ್ಲ, 21ನೇ ಶತಮಾನಕ್ಕೆ ತಕ್ಕನಾಗಿ ಇದೆಲ್ಲವನ್ನು ಮೊಬೈಲ್ ಅಥವಾ ಲ್ಯಾಪ್‌ಟಾಪ್ ನಲ್ಲಿ ಮನೆಯಲ್ಲಿಯೇ ಪಡೆಯಬಹುದು. ಯೋಗ, ಧ್ಯಾನದ ಒಳಮರ್ಮವನ್ನು ಅರಿಯಬೇಕೆಂಬ ಸ್ವಲ್ಪವೇ ಕುತೂಹಲವಿದ್ದರೂ ಇದೊಂದು ಅನನ್ಯ ಕಾರ್ಯಕ್ರಮ. ಇಂದಿನ ನಮ್ಮ ಮಿಂಚಿನ ಓಟದ ಬದುಕಿನ ಅವಶ್ಯಕತೆಯೂ ಹೌದು. ಈ ಕಾರ್ಯಕ್ರಮ ಹಲವು ಭಾಷೆಗಳಲ್ಲಿ ಲಭ್ಯವಿದ್ದರೂ ಇಂಗ್ಲಿಷ್ ನಲ್ಲಿ ಪಡೆಯುವುದೇ ಉತ್ತಮ ಎಂಬುದು ನನ್ನ ಅಭಿಪ್ರಾಯ. ಇಂಗ್ಲಿಷ್‌ನಲ್ಲಿ ಸದ್ಗುರು ಅವರ ಅಸಲಿ ಧ್ವನಿಯಲ್ಲಿಯೇ ಕೇಳಬಹುದು. ಕನ್ನಡ ಮತ್ತು ಉಳಿದ ಭಾಷೆಗಳಲ್ಲಿ ಕೂಡ ಕಾರ್ಯಕ್ರಮ ಲಭ್ಯವಿದೆ. ಆದರೆ ಕನ್ನಡದ ಅನುವಾದ ನನಗೇಕೋ ಅಷ್ಟು ಸರಿ ಇದೆಯೆನಿಸಲಿಲ್ಲ.

ಇನ್ನರ್ ಎಂಜಿನಿಯರಿಂಗ್‌ನಲ್ಲಿ ಇರುವ ಒಂದು ಮುಖ್ಯ ಪಾಠ- ದೇಹ, ಮನಸ್ಸು ಮತ್ತು ನಾನು ಎಂಬ ಭಾವ ಇವು ಮೂರೂ ಪ್ರತ್ಯೇಕ ಎಂಬ ಸೂಕ್ಷ್ಮ ವಿಚಾರ. ಸದ್ಗುರು ಈ ವಿಷಯವನ್ನು ಬಹಳ ಮನೋಜ್ಞವಾಗಿ ಈ ಕಾರ್ಯಕ್ರಮದಲ್ಲಿ ವಿವರಿಸುತ್ತಾರೆ. ಅಷ್ಟೇ ಅಲ್ಲ, ಅದನ್ನು ಪರಾಮರ್ಶಿಸಲು ಪ್ರಯೋಗ ಮಾಡುವಂತೆ ಪ್ರೇರೇಪಿಸುತ್ತಾರೆ. ನಾನು ಅವರ ಈ ಪಾಠ ಕೇಳಿಸಿಕೊಂಡಾಗ ಇದು ಜಗತ್ತನ್ನು ನೋಡುವ ಇನ್ನೊಂದು ಹೊಸ ಆಯಾಮ ಎಂದಷ್ಟೇ ಅಂದುಕೊಂಡಿದ್ದೆ. ನಾವು ಭಾರತೀಯರೇ ಹಾಗಲ್ಲವೇ, ಯಾವುದನ್ನೂ ಸುಲಭಕ್ಕೆ ನಂಬುವುದಿಲ್ಲ. ಕೆಲವು ದಿನಗಳ ಹಿಂದೆ ಸದ್ಗುರು ಮಾಧ್ಯಮ ಸಮಾವೇಶವೊಂದರಲ್ಲಿ ಮಾತನಾಡುತ್ತಿದ್ದರು. ಅದಾದ ಮೇಲೆ ನಮಗೆಲ್ಲ ತಿಳಿದದ್ದೇನೆಂದರೆ ಆ ಸಮಾವೇಶದಲ್ಲಿ ಮಾತನಾಡುವಾಗ ಸದ್ಗುರು ವಿಪರೀತ ತಲೆನೋವಿನಿಂದ ಬಳಲುತ್ತಿದ್ದರು ಎಂಬುದು. ಅವರ ಮಾತನ್ನು ಅಂದು ಕೇಳಿದ ಯಾರೊಬ್ಬರಿಗೂ ಇವರ ದೇಹದಲ್ಲಿ ಅನಾರೋಗ್ಯವಿದೆ ಎಂಬ ಒಂದು ಸುಳಿವೂ ಹತ್ತಿರಲಿಲ್ಲ. ಸದ್ಗುರು ಅಂದು ಅಲ್ಲಿ ಮಾತನಾಡುವಾಗ ಅವರ ಮಿದುಳಿನಲ್ಲಿ ರಕ್ತಸ್ರಾವವಾಗಿತ್ತು. ಮಿದುಳಿನ ರಕ್ತಸ್ರಾವ ಎಂದರೆ ಅದರ ನೋವಿನ ಪ್ರಮಾಣ ಕಲ್ಪಿಸಿಕೊಳ್ಳಲಿಕ್ಕೂ ಸಾಧ್ಯವಿಲ್ಲ. ಸಾಮಾನ್ಯವಾಗಿ ಇಷ್ಟು ನೋವು ಇದ್ದ ರೋಗಿಗಳಿಗೆ ಮಾರ್ಫಿನ್ ಒಂದೇ ಪರಿಹಾರ. ಮಾರ್ಫಿನ್ ನಮ್ಮ ಮಿದುಳಿನ ನೋವಿನ ಗ್ರಹಿಕೆಯನ್ನು ತಗ್ಗಿಸಿ ಕೊಂಚ ಆರಾಮ ಕೊಡುತ್ತದೆ. ಈಗ ಎರಡು ವರ್ಷದ ಹಿಂದೆ ನನ್ನ ಸ್ನೇಹಿತರೊಬ್ಬರಿಗೆ ಇದೇ ರೀತಿ ಮಿದುಳಿನಲ್ಲಿ ರಕ್ತಸ್ರಾವವಾಗಿತ್ತು. ಅವರು ಬೊಬ್ಬೆ ಹೊಡೆದುಕೊಳ್ಳುವ ಸನ್ನಿವೇಶ ನನಗಿನ್ನೂ ಸ್ಪಷ್ಟವಾಗಿ ನೆನಪಿದೆ. ಕೊನೆಯಲ್ಲಿ ಡಾಕ್ಟರ್ ಮಾರ್ಫಿನ್ ಕೊಟ್ಟರು. ಅದಾದ ಕೆಲವೇ ಕ್ಷಣಗಳಲ್ಲಿ ಗೆಳೆಯನ ತಲೆನೋವು ಸ್ವಲ್ಪ ತಡೆದುಕೊಳ್ಳುವಷ್ಟಾಯಿತು. ಆದರೆ ಮಾರ್ಫಿನ್ ಮತ್ತು ಒಂದಿಷ್ಟು ಔಷಧಿ ದೇಹದೊಳಕ್ಕೆ ಹೋಗುತ್ತಿದ್ದಂತೆ ನನ್ನ ಗೆಳೆಯ ಏನೇನೋ ಹಲುಬಲು ಶುರುಮಾಡಿದ್ದ. ಅವನ ಹೆಂಡತಿಯ, ಮಕ್ಕಳ ಗುರುತನ್ನೇ ಮರೆತಿದ್ದ. ಗೆಳೆಯನಿಗೆ ಆದ ರಕ್ತಸ್ರಾವದ ಪ್ರಮಾಣ ಸದ್ಗುರು ಅವರ ಮಿದುಳಿನಲ್ಲಾದ ರಕ್ತಸ್ರಾವಕ್ಕೆ ಹೋಲಿಸಿದರೆ ಅರ್ಧದಷ್ಟು, ಅಷ್ಟಕ್ಕೇ ಅವನು ಪರದಾಡಿಬಿಟ್ಟಿದ್ದ. ಆದರೆ ಸದ್ಗುರು ಮಿದುಳಿನ ರಕ್ತಸ್ರಾವದ ನಂತರ ಕೂಡ ಸಮಾವೇಶದಲ್ಲಿ ಭಾಗಿಯಾಗಿದ್ದರು. ಅಷ್ಟೇ ಅಲ್ಲ, ಅಂದು ಅವರು ಮುಂಚಿನಂತೆ ವೈಚಾರಿಕ ಸ್ಪಷ್ಟತೆಯಿಂದ ಮಾತನಾಡಿದ್ದರು. ಇದು ಸದ್ಗುರುಗಳೇ ಹೇಳಿದ ದೇಹ, ಮನಸ್ಸು ಮತ್ತು ಅಹಂ ಈ ಮೂರನ್ನು ಪ್ರತ್ಯೇಕಿಸಿದವರಿಗಷ್ಟೇ ಸಾಧ್ಯ.



ನಾನು ಇಲ್ಲಿ ಸದ್ಗುರುಗಳ ಯಾವೊಂದು ಮಹತ್ಕಾರ್ಯದ ಬಗ್ಗೆ ಹೆಚ್ಚಿಗೆ ವಿವರಿಸುವುದಿಲ್ಲ, ಅವೆಲ್ಲವೂ ಸ್ವಲ್ಪ ಹುಡುಕಿದರೆ ನಿಮಗೆ ಸಿಕ್ಕಿಬಿಡುತ್ತದೆ. ಅವರ ಕೆಲವು ಮಹತ್ವಾಕಾಂಕ್ಷಿ ಕೆಲಸಗಳಾದ ‘ಮಣ್ಣನ್ನು ಉಳಿಸಿ’ (save soil), ‘ಕಾವೇರಿ ಕಾಲಿಂಗ್’ ಮೊದಲಾದ ಅಭಿಯಾನಗಳ ಬಗ್ಗೆ ನಿಮಗೆಲ್ಲ ತಿಳಿದೇ ಇರುತ್ತದೆ. ಅವುಗಳು ಒಂದು ಕಡೆ. ಇಂದು ಇಶಾ ಫೌಂಡೇಷನ್ ಜಗತ್ತಿನ ಹಲವಾರು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲೆಲ್ಲ ಯೋಗ, ಧ್ಯಾನ, ಹಿಂದೂ ಧರ್ಮದ ವೈಚಾರಿಕ ಪ್ರಚಾರ ಇವರಿಂದ ನಡೆಯುತ್ತಿದೆ. ಅಮೆರಿಕದ ಟೆನೆಸಿ ರಾಜ್ಯದಲ್ಲಿ ಇಶಾ ಆಶ್ರಮ ಸುಮಾರು 14 ಸಾವಿರ ಎಕರೆ ವಿಸ್ತಾರದ ಜಾಗದಲ್ಲಿದೆ. ಅಲ್ಲಿನ ಧ್ಯಾನ ಮಂಟಪವೇ 39 ಸಾವಿರ ಚದರ ಅಡಿ ವಿಸ್ತಾರದ್ದಿದೆ. ಅಲ್ಲಿಗೆ ಸದ್ಗುರು ಆಗೀಗ ಭೇಟಿ ನೀಡುತ್ತಿರುತ್ತಾರೆ. ಅಷ್ಟೇ ಅಲ್ಲ, ಕೆನಡಾ, ದಕ್ಷಿಣ ಅಮೆರಿಕ, ಇಂಗ್ಲೆಂಡ್, ಸ್ವಿಜರ್ಲೆಂಡ್, ಐರೋಪ್ಯ ರಾಷ್ಟ್ರಗಳು ಹೀಗೆ ಎಲ್ಲೆಡೆ ಆಶ್ರಮಗಳನ್ನು ಕಟ್ಟಿನಿಲ್ಲಿಸಿದ್ದಾರೆ. ಆಯಾ ದೇಶದ ಸ್ಥಳೀಯ ಜನರಿಗೆ ಭಾರತೀಯ ಅಧ್ಯಾತ್ಮವನ್ನು ಪರಿಚಯಿಸುತ್ತಿದ್ದಾರೆ. ಇವರ ಕಾರ್ಯಕ್ರಮದ ಉದ್ದೇಶ ಮತಾಂತರವಲ್ಲದಿದ್ದರೂ ಇವರಲ್ಲಿ ಬಂದು ಬಹುತೇಕರು ಹಿಂದುತ್ವವನ್ನು ತಮ್ಮದಾಗಿಸಿಕೊಳ್ಳುತ್ತಿದ್ದಾರೆ.

ಸದ್ಗುರು ಹಣ ಮಾಡುತ್ತಾರೆ, ಹಿಂದೂ ಜ್ಞಾನವನ್ನು ಮಾರಾಟಕ್ಕಿಟ್ಟಿದ್ದಾರೆ ಎಂಬೆಲ್ಲ ಮಾತುಗಳು ಆಗೀಗ ಕೇಳುವುದಿದೆ. ನೀವು ಸುಮ್ಮನೆ ಯೂಟ್ಯೂಬಿನಲ್ಲಿ Fake Sadhguru ಎಂದು ಹುಡುಕಿದರೆ ಅವರನ್ನು ದ್ವೇಷಿಸುವ ಒಂದು ದೊಡ್ಡ ವರ್ಗ ಕಣ್ಣೆದುರಿಗೆ ಕಾಣಿಸುತ್ತದೆ. ಆರೋಗ್ಯ ಸರಿಯಿಲ್ಲವೆಂದು ಅವರು ಮೊನ್ನೆ ಆಸ್ಪತ್ರೆಗೆ ದಾಖಲಾದಾಗ, ‘ಇದನ್ನೂ ಅವರ ದಿವ್ಯಶಕ್ತಿಯಿಂದಲೇ ಸರಿಪಡಿಸಿಕೊಳ್ಳಬೇಕಿತ್ತು’ ಎಂದು ಕುಹಕವಾಡಿದವರಿದ್ದಾರೆ. ಆದರೆ ಸದ್ಗುರು ಆ ರೀತಿಯಲ್ಲಿ ಯೋಗ, ಧ್ಯಾನವನ್ನು ಕಲಿಸುವುದಿಲ್ಲ ಎಂಬ ಅರಿವು ಇವರಿಗ್ಯಾರಿಗೂ ಇಲ್ಲ, ಇವರೆಲ್ಲ ಹೊರಗೆ ನಿಂತು ಕಲ್ಲು ಹೊಡೆಯುವುದನ್ನೇ ತಮ್ಮ ಅಸ್ತಿತ್ವವಾಗಿಸಿಕೊಂಡವರು. ಮೊದಲಿನಿಂದಲೂ ಇದೊಂದು ರೋಗ ಭಾರತೀಯರಿಗಿದೆ. ಅದು ನಮ್ಮಲ್ಲಿ ಇಂದಿಗೂ ಜೀವಂತವಾಗಿರುವ ವಸಾಹತುಶಾಹಿ ಬುದ್ಧಿಗೆ ಸಾಕ್ಷಿ. ಅಂತೆಯೇ ಅವರ ಈ ಜನಪ್ರಿಯತೆಯನ್ನು ವ್ಯವಸ್ಥಿತವಾಗಿ ಜರೆಯುವ ಒಂದು ವರ್ಗ ಪಶ್ಚಿಮದಲ್ಲಿಯೂ ಇದೆ. ಅದನ್ನು ಪೋಷಿಸಲು, ಖರ್ಚು ನೋಡಿಕೊಳ್ಳಲು ಅನ್ಯ ಧಾರ್ಮಿಕ ಸಂಸ್ಥೆಗಳಿವೆ. ಅವೆಲ್ಲದಕ್ಕೆ ಅವರದೇ ಆದ ಧಾರ್ಮಿಕ ದುರುದ್ದೇಶಗಳಿವೆ. ಈ ರೀತಿಯ ಅಸಹ್ಯವೆನಿಸುವ ಆರೋಪಗಳು, ದುರುದ್ದೇಶಪೂರಿತ ನಡೆಗಳು, ಪಿತೂರಿಗಳನ್ನು ಹಿಂದೂ ಧರ್ಮದ ಗುರುಗಳೆಲ್ಲ ಅನುಭವಿಸಲೇಬೇಕು. ಜೀವಂತವಿರುವ ಗುರುಗಳನ್ನು ಬಿಡಿ, ಅದೆಷ್ಟೋ ಹಿಂದೆ ಬದುಕಿದ್ದ ಮಹಾನ್ ಗುರು ವ್ಯಕ್ತಿತ್ವವನ್ನು ಇಂದಿಗೂ ಜರೆಯುವವರಿದ್ದಾರೆ. ಇತ್ತೀಚೆಗೆ ಪುರುಷೋತ್ತಮ ಬಿಳಿಮಲೆ ಎಂಬ ಅಧಿಕ ಪ್ರಸಂಗಿಯೊಬ್ಬರು ಫೇಸ್‌ಬುಕ್‌ನಲ್ಲಿ ರಾಮಕೃಷ್ಣ ಪರಮಹಂಸರನ್ನು ಒಬ್ಬ ಕೆಟ್ಟ ಗಂಡ ಎಂಬರ್ಥದಲ್ಲಿ ಬರೆದುಕೊಂಡಿದ್ದರು. ಇದನ್ನು ಯಾರೋ ಹೇಳಿದ್ದು, ಕುವೆಂಪು ರಾಮಕೃಷ್ಣ ಪರಮಹಂಸರ ಬಗ್ಗೆ ಹಗುರವಾಗಿ ಮಾತನಾಡಿದ್ದರು ಎಂದೆಲ್ಲ. ‘ಇವನ್ಯಾರಯ್ಯಾ ಪರಮಹಂಸ, ಹೆಂಡತಿಯ ಜತೆ ನಡೆಯದವ ಲೋಕದ ಜತೆ ನಡೆಯುತ್ತಾನಂತೆ!’ ಎಂದು ಪರಮಹಂಸರ ಬಗ್ಗೆ ಕುವೆಂಪು ಹೇಳಿದ್ದನ್ನು ಇನ್ಯಾರೋ ಇಂದು ಬದುಕಿಲ್ಲದವರು ಹೇಳಿದ್ದರು ಎಂದು ಬರೆದುಕೊಂಡಿದ್ದರು. ಈ ರೀತಿ ತೀರಾ ಹೇಸಿಗೆಯೆನಿಸುವ ರೀತಿಯಲ್ಲಿ ನಮ್ಮ ಸನಾತನ ಗುರುಗಳ ಬಗ್ಗೆ ಕೇವಲವಾಗಿ ಮಾತನಾಡುವುದು, ಹಳಿಯುವುದು ತೀರಾ ಸಾಮಾನ್ಯ. ಅಂತೆಯೇ ಇಂಥ ಆರೋಪಗಳು ಸದ್ಗುರುಗಳ ಬಗ್ಗೆಯೂ ಇವೆ.

ನಿಮ್ಮಲ್ಲಿ ಒಂದು ಪ್ರಶ್ನೆ. ಜಗದ್ಗುರು ಎಂಬ ಶಬ್ದವನ್ನು ನಾವು ಹಲವು ಮಠಾಧೀಶರಿಗೆ ಬಳಸುವುದುಂಟು. ಇಂಥ ನಾಮ ವಿಶೇಷ ಹಲವು ಪೀಠಗಳಿಗಿವೆ. ಆದರೆ ಅವರಲ್ಲಿ ಭಾರತವನ್ನು, ಅದರಾಚೆಯ ವಿಶಾಲ ಜಗತ್ತನ್ನು ಇಂದಿನ ಕಾಲದಲ್ಲಿ ವ್ಯಾಪಿಸಿದವರು ಬಹಳ ಕಡಿಮೆ. ಪೂಜ್ಯ ಸದ್ಗುರು, ಆರ್ಟ್ ಆಫ್ ಲಿವಿಂಗ್‌ನ ಪೂಜ್ಯ ರವಿಶಂಕರರು ಹೀಗೆ ಕೆಲವೇ ಕೆಲವರು. ಸದ್ಗುರು ಮಠಾಧೀಶರಂತಲ್ಲ, ಅವರನ್ನು ಹಾಗೆ ನೋಡುವುದು, ಪರಿಭಾವಿಸುವುದು ಕೂಡ ಸಲ್ಲ, ಅವರೊಬ್ಬ ಪ್ರಾಕ್ಟಿಕಲ್ ನವ್ಯಗುರು. ಅವರಿಗೆ ನಿರ್ಗಳ ಭಾಷೆ ಗೊತ್ತು, ವ್ಯವಹಾರ ಗೊತ್ತು, ಯಾವುದನ್ನು ಹೇಗೆ ನಿಭಾಯಿಸಬೇಕೆಂಬ ಅರಿವು, ಮಾಹಿತಿಯಿದೆ. ಬಹುಶಃ ಸೋಷಿಯಲ್ ಮೀಡಿಯಾವನ್ನು ಸದ್ಗುರು ಬಳಸಿಕೊಂಡಷ್ಟು ಇನ್ನೊಬ್ಬ ಧರ್ಮಗುರು ಬಳಸಿಕೊಂಡದ್ದು ನಾನಂತೂ ನೋಡಿಲ್ಲ.

ನಮ್ಮಲ್ಲಿ ಇಂದಿಗೂ ಅದೆಷ್ಟೋ ಸಮರ್ಥ ಸ್ವಾಮೀಜಿ, ಧಾರ್ಮಿಕ ಗುರುಗಳು ಇದ್ದಾರೆ. ಅವರೆಲ್ಲ ಅಧ್ಯಾತ್ಮದಲ್ಲಿ ಶ್ರೇಷ್ಠ ಸಾಧನೆಗೈದವರೇ. ಆದರೆ ಅವರ್‍ಯಾರೂ ಸದ್ಗುರುವಾಗಿಲ್ಲ. ನಮ್ಮಲ್ಲಿ ಧಾರ್ಮಿಕ ವಿಚಾರ ಬಂದಾಕ್ಷಣ ಅಲ್ಲಿ ಹಣ, ವ್ಯವಹಾರ ಬರಬಾರದು, ಗುರು, ಸನ್ಯಾಸಿಯಾದವನು ಸರ್ವಸಂಗ ಪರಿತ್ಯಾಗಿಯಾಗಿರಬೇಕು, ಹಣವನ್ನಂತೂ ಮುಟ್ಟಲೇ ಬಾರದು ಎಂಬುದು ನಂಬಿಕೆ. ಓಬಿರಾಯನ ಕಾಲದ್ದಾದರೂ ಅದೇಕೋ ಈ ನಂಬಿಕೆಯ ಮೇಲೆ ನಮಗೆ ಧರ್ಮಕ್ಕಿಂತ ಜಾಸ್ತಿ ಪ್ರೀತಿ ಇದ್ದಂತಿದೆ. ಅದೇ ಕಾರಣಕ್ಕೆ ಸದ್ಗುರು ಇಷ್ಟು ದುಡ್ಡು ಮಾಡಿದರು, ಅವರ ಕಾರ್ಯಕ್ರಮಗಳಿಗೆ ಇಷ್ಟು ಹಣ ಪಡೆಯುತ್ತಾರೆ ಇತ್ಯಾದಿ ಆರೋಪಗಳು. ಈ ನೆಲದಲ್ಲಿ ಅಧ್ಯಾತ್ಮ ವಿಷಯವಿಟ್ಟುಕೊಂಡು ಮೋಸ ಮಾಡಿದ, ಮಾಡುತ್ತಿರುವ ಢೋಂಗಿ ಗುರುಗಳಿಗೇನೂ ಕಡಿಮೆಯಿಲ್ಲ. ಆದರೆ ಅದೇ ತೂಕದ ತಕ್ಕಡಿಯಲ್ಲಿ ಸದ್ಗುರುವಿನಂಥವರನ್ನು ನೋಡುವ ಕೆಲಸ ಅಕ್ಷಮ್ಯ. ಹಿಂದೂ ಗುರುಗಳನ್ನು, ಮಠಮಾನ್ಯಗಳನ್ನು ಜರೆಯುವುದೇ ಪ್ರಗತಿಶೀಲತೆ ಎಂದು ತಿಳಿದುಕೊಂಡಿರುವ ಇಂಥ ಜನರಿಗೆ, ಇದು ಬ್ರಿಟಿಷರು ಈ ದೇಶ ಒಡೆಯಲು ಬಳಸಿಕೊಂಡ ಅಸ್ತ್ರ ಎಂಬ ಕಿಂಚಿತ್ ಅರಿವೂ ಇಲ್ಲ. ಸದ್ಗುರುಗಳ ಕಾರ್ಯವ್ಯಾಪ್ತಿ, ಅದು ಸಮಾಜದಲ್ಲಿ ತಂದ ಬದಲಾವಣೆ, ಅದರ ಜತೆಯಲ್ಲಿ ಹಿಂದುತ್ವ ಈ ಮೂಲಕ ಹರಡುತ್ತಿರುವುದು ಇವು ಯಾವುದೂ ಈ ಮಂದಿಗೆ ಕಾಣಿಸುವುದಿಲ್ಲ. ‘ಇನ್ನರ್ ಎಂಜಿನಿಯರಿಂಗ್ ಎಂಬ ಹೆಸರಿನಲ್ಲಿ ಸದ್ಗುರು ದುಡ್ಡು ಮಾಡುತ್ತಿದ್ದಾರೆ’ ಎಂಬುದಷ್ಟೇ ಇವರ ಆರೋಪ. ಇವರಿಗೆ ಎಲ್ಲವೂ ಪುಕ್ಕಟ್ಟೆ ಆಗಬೇಕು. ಆಗಲೂ ಇವರ ಪ್ರಶ್ನೆ ನಿಲ್ಲುವುದಿಲ್ಲ, ಇದೆಲ್ಲ ಕಾರ್ಯಕ್ರಮಕ್ಕೆ ತಗಲುವ ಖರ್ಚನ್ನು ಯಾರು ಭರಿಸುತ್ತಾರೆ ಎಂಬ ಪ್ರಶ್ನೆಗೆ ಇವರಲ್ಲಿ ಉತ್ತರವಿಲ್ಲ.

ಸದ್ಗುರು ತಮ್ಮ ದೇಹ ಚೇತರಿಸಿಕೊಂಡ ನಂತರ ಮೊನ್ನೆ ಆಸ್ಪತ್ರೆಯಿಂದ ಹೊರಬಂದಿದ್ದಾರೆ. ಅದು ಸಮಾಧಾನ ತರುವಂಥದ್ದು. ಆದರೆ ಇದೇ ಸಮಯದಲ್ಲಿ ಇನ್ನೊಂದು ಪ್ರಶ್ನೆಯೇಳುತ್ತದೆ. ಅವರದು ಯಾವುದೇ ಪೀಠವಲ್ಲ, ಅವರ ನಂತರ ಉತ್ತರಾಧಿಕಾರಿ ನೇಮಿಸುವುದು ಇತ್ಯಾದಿ ಇದ್ದಂತಿಲ್ಲ, ಹೀಗಿರುವಾಗ ಅವರ ನಂತರ ಮುಂದೇನು, ಯಾರು ಈ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಾರೆ ಎಂಬುದು ಪ್ರಶ್ನೆ. ಏಕೆಂದರೆ ಅವರು ಕಟ್ಟಿ ನಿಲ್ಲಿಸಿದ ವ್ಯವಸ್ಥೆ ಇನ್ನೊಬ್ಬರಿಂದ ನಿರ್ವಹಿಸಲೂ ಅಸಾಧ್ಯ. ಜಗದ್ಗುರುಗಳಿಗೆ ಪರ್ಯಾಯ ಇನ್ನೊಂದು ಜಗದ್ಗುರು ಮಾತ್ರ.

# ಆಧ್ಯಾತ್ಮಿಕ ಪ್ರಜ್ಞೆಯ ನಿಜಪ್ರವರ್ತಕ

**ಸ್ವಾಮಿ ಸ್ಮರಣಾನಂದ ಜೀ ಅವರು ಆಚಾರ್ಯ ರಾಮಕೃಷ್ಣ ಪರಮಹಂಸ, ಮಾತಾ ಶಾರದಾ ದೇವಿ ಮತ್ತು ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ಜಗತ್ತಿನಾದ್ಯಂತ ಪಸರಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಅವರ ಶಾಶ್ವತ ನಿರ್ಗಮನ ಅನೇಕ ಜನರನ್ನು ದುಃಖಿತರನ್ನಾಗಿಸಿದೆ.**



ಸಂಸ್ಮರಣೆ

ನರೇಂದ್ರ ಮೋದಿ
vveditoped@gmail.com

ಲೋಕಸಭಾ ಚುನಾವಣೆಯ ಮಹಾ ಉತ್ಸವ, ಸಡಗರದ ನಡುವೆ ಶ್ರೀಮದ್ ಸ್ವಾಮಿ ಸ್ಮರಣಾನಂದ ಜೀ ಮಹಾರಾಜ್ ಅವರ ಅಗಲಿಕೆಯ ಸುದ್ದಿ ನಮ್ಮ ಮನಸ್ಸನ್ನು ಕೆಲವು ಕಾಲ ಸ್ತಬ್ಧಗೊಳಿಸಿತು. ಶ್ರೀಮದ್ ಸ್ವಾಮಿ ಸ್ಮರಣಾನಂದ ಜೀ ಮಹಾರಾಜ್ ಭಾರತದ ಆಧ್ಯಾತ್ಮಿಕ ಪ್ರಜ್ಞೆಯ ಪ್ರವರ್ತಕರು ಮತ್ತು ಅವರ ನಿಧನದಿಂದ ನಮಗೆಲ್ಲರಿಗೂ ವೈಯಕ್ತಿಕವಾಗಿ ನಷ್ಟವಾಗಿದೆ. ಕೆಲವು ವರ್ಷಗಳ ಹಿಂದೆ ಸ್ವಾಮಿ ಆತ್ಮಸ್ಥಾನಂದ ಜೀ ಅವರು ನಿಧನ ಹೊಂದಿದರು ಮತ್ತು ಈಗ ಸ್ವಾಮಿ ಸ್ಮರಣಾನಂದ ಜೀ ಅವರ ಶಾಶ್ವತ ನಿರ್ಗಮನ ಅನೇಕ ಜನರನ್ನು ದುಃಖಿತರನ್ನಾಗಿ ಮಾಡಿದೆ. ಕೋಟ್ಯಂತರ ಭಕ್ತರು, ಸಂತರು ಮತ್ತು ರಾಮಕೃಷ್ಣ ಮಠ ಹಾಗೂ ಮಿಷನ್‌ನ ಅನುಯಾಯಿಗಳ ಹೃದಯದಂತೆ ನನ್ನ ಹೃದಯ ಕೂಡ ದುಃಖಿತವಾಗಿದೆ.

ಈ ತಿಂಗಳ ಆರಂಭದಲ್ಲಿ ನಾನು ಕೋಲ್ಕತ್ತಾಗೆ ಭೇಟಿ ನೀಡಿದ್ದಾಗ ಸ್ವಾಮಿ ಸ್ಮರಣಾನಂದ ಜೀ ಅವರ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ತೆರಳಿದ್ದೆ. ಸ್ವಾಮಿ ಆತ್ಮಸ್ಥಾನಂದ ಜೀ ಅವರಂತೆ ಸ್ವಾಮಿ ಸ್ಮರಣಾನಂದ ಜೀ ಅವರು ಸಹ ಆಚಾರ್ಯ ರಾಮಕೃಷ್ಣ ಪರಮಹಂಸ, ಮಾತಾ ಶಾರದಾ ದೇವಿ ಮತ್ತು ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ಜಗತ್ತಿನಾದ್ಯಂತ ಪಸರಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಈ ಲೇಖನ ಬರೆಯುವಾಗ ಅವರೊಂದಿಗಿನ ಭೇಟಿಗಳು ಮತ್ತು ಸಂವಾದಗಳು ನನ್ನ ಮನಸ್ಸನ್ನು ಹೊಸದಾಗಿ ಹಾದುಹೋದವು.

ಕಳೆದ 2020ರ ಜನವರಿಯಲ್ಲಿ ಬೇಲೂರು ಮಠಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ನಾನು ಸ್ವಾಮಿ ವಿವೇಕಾನಂದರ ಕೋಣೆಯಲ್ಲಿ ಧ್ಯಾನ ಮಾಡಿದ್ದೆ. ಭೇಟಿ ಕಾಲದಲ್ಲಿ ಸ್ವಾಮಿ ಆತ್ಮಸ್ಥಾನಂದ ಜೀ ಅವರ ಕುರಿತು ಸ್ವಾಮಿ ಸ್ಮರಣಾನಂದ ಜೀ ಅವರೊಂದಿಗೆ ಸುದೀರ್ಘ ಕಾಲ ಸಂಭಾಷಣೆ ನಡೆಸಿದ್ದೆ.

ನಾನು ಬೇಲೂರು ಮಠ ಮತ್ತು ರಾಮಕೃಷ್ಣ ಮಿಷನ್ ನೊಂದಿಗೆ ನಿಕಟವಾದ ಬಾಂಧವ್ಯ ಹೊಂದಿರುವುದು ವಿಸ್ತೃತವಾಗಿ ಎಲ್ಲರಿಗೂ ತಿಳಿದಿದೆ. ಆಧ್ಯಾತ್ಮಿಕತೆಯ ಅನ್ವೇಷಕನಾಗಿ ನಾನು ವಿವಿಧ ಸಾಧು-ಸಂತರು ಮತ್ತು ಮಹಾತ್ಮರನ್ನು ಭೇಟಿ ಮಾಡಿದ್ದೇನೆ ಮತ್ತು ಐದು ದಶಕಗಳಲ್ಲಿ ಅನೇಕ ಸ್ಥಳಗಳಿಗೆ ತೆರಳಿದ್ದೇನೆ. ರಾಮಕೃಷ್ಣ ಮಠದಲ್ಲಿ, ಆಧ್ಯಾತ್ಮಿಕವಾಗಿ ತಮ್ಮ ಬದುಕನ್ನು ಸ್ವಾಮಿ ಆತ್ಮಸ್ಥಾನಂದ ಜೀ ಮತ್ತು ಸ್ವಾಮಿ ಸ್ಮರಣಾನಂದ ಜೀ ಅವರಂತೆ ಪ್ರಮುಖವಾಗಿ ಸಮರ್ಪಿಸಿಕೊಂಡವರ ಬಗ್ಗೆ ಮಾಹಿತಿ ಇದೆ. ಅವರ ಪವಿತ್ರ ಆಲೋಚನೆಗಳು ಮತ್ತು ಜ್ಞಾನ ನನ್ನ ಮನಸ್ಸಿಗೆ ತೃಪ್ತಿ ನೀಡಿವೆ. ನನ್ನ ಜೀವನದ ಅತ್ಯಂತ ಮಹತ್ವದ ಅವಧಿಯಲ್ಲಿ ಇಂಥ ಸಂತರು ‘ಜನಸೇವೆಯೇ ಪ್ರಭುಸೇವೆ’ ಎಂಬ ನಿಜವಾದ ತತ್ವವನ್ನು ನಮಗೆಲ್ಲ ಕಲಿಸಿದ್ದಾರೆ. ಆತ್ಮಸ್ಥಾನಂದ ಜೀ ಮತ್ತು ಸ್ವಾಮಿ ಸ್ಮರಣಾನಂದ ಜೀ ಅವರಂತೆ ರಾಮಕೃಷ್ಣ ಮಿಷನ್‌ನ ‘ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ’ ಎಂಬ ಧ್ಯೇಯವಾಕ್ಯವು ಅಳಿಸಲಾಗದ ಉದಾಹರಣೆಯಾಗಿದೆ.



ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ರಾಮಕೃಷ್ಣ ಮಿಷನ್‌ನ ಪ್ರಮುಖ ಕೆಲಸ ನಮ್ಮೆಲ್ಲರಿಗೂ ಸ್ಫೂರ್ತಿದಾಯಕವಾಗಿದೆ. ಭಾರತದ ಆಧ್ಯಾತ್ಮಿಕ ಜ್ಞಾನ, ಶೈಕ್ಷಣಿಕ ಸಬಲೀಕರಣ ಮತ್ತು ಮಾನವೀಯ ವಲಯದಲ್ಲಿ ರಾಮಕೃಷ್ಣ ಮಿಷನ್ ಸೇವೆ ಸಲ್ಲಿಸುತ್ತಿದೆ. 1978ರಲ್ಲಿ ಬಂಗಾಳದಲ್ಲಿ ಪ್ರವಾಹದಿಂದ ಸಂಕಷ್ಟ ಎದುರಾದಾಗ ರಾಮಕೃಷ್ಣ ಮಿಷನ್ ಕೈಗೊಂಡ ಸ್ವಾರ್ಥರಹಿತ ಸೇವೆ ಪ್ರತಿಯೊಬ್ಬರ ಹೃದಯವನ್ನು ಗೆದ್ದಿದೆ. 2001ರಲ್ಲಿ ಗುಜರಾತ್‌ನ ಕಛ್‌ನಲ್ಲಿ ಭೂಕಂಪನವಾದಾಗ, ಸ್ವಾಮಿ ಆತ್ಮಸ್ಥಾನಂದ ಜೀ ಅವರು ಮೊದಲು ನನ್ನೊಂದಿಗೆ ದೂರವಾಣಿ ಮೂಲಕ ಮಾತನಾಡಿದ ವ್ಯಕ್ತಿಯಾಗಿದ್ದರು ಮತ್ತು ಸಂಕಷ್ಟದಲ್ಲಿರುವ ಜನರಿಗೆ ಸಾಧ್ಯವಾದಷ್ಟು ನೆರವು ನೀಡಲು ರಾಮಕೃಷ್ಣ ಮಿಷನ್ ಸಿದ್ಧವಾಗಿದೆ ಎಂದು ಹೇಳಿದ್ದರು. ಇದು ನನಗೆ ಚೆನ್ನಾಗಿ ನೆನಪಿದೆ. ಅವರ ಮಾರ್ಗದರ್ಶನದಲ್ಲಿ ರಾಮಕೃಷ್ಣ ಮಿಷನ್, ಭೂಕಂಪನದಿಂದ ತೊಂದರೆಗೀಡಾದ ಹಲವಾರು ಜನರಿಗೆ ನೆರವಾಯಿತು.

ಹಲವಾರು ವರ್ಷಗಳಿಂದ ಸ್ವಾಮಿ ಆತ್ಮಸ್ಥಾನಂದ ಜೀ ಮತ್ತು ಸ್ವಾಮಿ ಸ್ಮರಣಾನಂದ ಜೀ ಅವರು ಹಲವಾರು ಹುದ್ದೆಗಳನ್ನು ನಿಭಾಯಿಸಿದ್ದು, ಇವರು ಸಾಮಾಜಿಕ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಿದರು. ಈ ಮಹಾನ್ ವ್ಯಕ್ತಿಗಳ ಜೀವನವನ್ನು ಬಲ್ಲವರು ಖಂಡಿತವಾಗಿಯೂ ಈ ಸಂತರು ಆಧುನಿಕ ಶಿಕ್ಷಣ ಮತ್ತು ಮಹಿಳಾ ಸಬಲೀಕರಣದ ಬಗ್ಗೆ ಎಷ್ಟೊಂದು ಗಂಭೀರವಾಗಿ ಆಲೋಚಿಸಿದ್ದರು ಎಂಬುದನ್ನು ನೆನಪಿಸಿಕೊಳ್ಳುತ್ತಾರೆ.

ಅವರ ಅನೇಕ ಸ್ಫೂರ್ತಿದಾಯಕ ಗುಣಲಕ್ಷಣಗಳಲ್ಲಿ ನನ್ನನ್ನು ಹೆಚ್ಚು ಪ್ರಭಾವಿಸಿದ ಒಂದು ವಿಷಯವೆಂದರೆ ಸ್ವಾಮಿ ಆತ್ಮಸ್ಥಾನಂದ ಜೀ ಅವರ ಪ್ರತಿಯೊಂದು ಸಂಸ್ಕೃತಿ ಮತ್ತು ಪ್ರತಿಯೊಂದು ಸಂಪ್ರದಾಯದ ಮೇಲಿನ ಪ್ರೀತಿ ಮತ್ತು ಗೌರವ. ಈ ಕಾರಣದಿಂದ ಭಾರತದ ವಿವಿಧ ಭಾಗಗಳಿಗೆ ನಾನು ನಿರಂತರವಾಗಿ ಭೇಟಿ ನೀಡಿದೆ ಮತ್ತು ಹೆಚ್ಚು ಸಮಯವನ್ನು ಕಳೆದೆ. ಅವರು ಗುಜರಾತ್‌ನಲ್ಲಿ ನೆಲೆಸಿದ್ದಾಗ ಗುಜರಾತಿ ಭಾಷೆ ಕಲಿತರು. ಅವರು ನನ್ನೊಂದಿಗೆ ಕೂಡ ಇದೇ ಭಾಷೆಯಲ್ಲಿ ಮಾತನಾಡುತ್ತಿದ್ದರು ಮತ್ತು ಅವರ ಗುಜರಾತಿ ಭಾಷೆಯನ್ನು ನಾನು ಪ್ರೀತಿಯಿಂದ ಆಲಿಸುತ್ತಿದ್ದೆ.

ಭಾರತದ ಅಭಿವೃದ್ಧಿ ಯಾನದಲ್ಲಿ ನಮ್ಮ ತಾಯ್ನೆಲವು ಹಲವಾರು ಸಂತರಿಂದ, ಸ್ವಾಮಿ ಆತ್ಮಸ್ಥಾನಂದ ಜೀ ಮತ್ತು ಸ್ವಾಮಿ ಸ್ಮರಣಾನಂದ ಜೀ ಅವರಂಥ ಶ್ರೀಗಳಿಂದ ಆಶೀರ್ವದಿಸಲ್ಪಟ್ಟಿದೆ. ಇವರೆಲ್ಲ ಸಾಮಾಜಿಕ ಬದಲಾವಣೆಗೆ ಪ್ರೇರಕ ಶಕ್ತಿಯಾಗಿದ್ದವರು. ಸಮಾಜದ ಎಲ್ಲಾ ಆಯಾಮದ ಸಮಸ್ಯೆಗಳನ್ನು ನಿವಾರಿಸಲು ಮತ್ತು ಸಾಮೂಹಿಕ ಸ್ಫೂರ್ತಿಯಿಂದ ಕಾರ್ಯನಿರ್ವಹಿಸಲು ಇವರು ಪ್ರೇರಣೆ ನೀಡಿದ್ದರು. ಈ ತತ್ವಗಳು ಶಾಶ್ವತವಾಗಿವೆ ಮತ್ತು ಅಮೃತ ಕಾಲದ ಈ ಸಮಯದಲ್ಲಿ ನಾವು ವಿಕಸಿತ ಭಾರತವನ್ನು ಅಭಿವೃದ್ಧಿಪಡಿಸಲು ಪ್ರಾರಂಭಿಸಿದಾಗ ನಮ್ಮ ಶಕ್ತಿಯ ಮೂಲವಾಗಿ ಇವು ಕಾರ್ಯನಿರ್ವಹಿಸುತ್ತವೆ.

ಇಡೀ ದೇಶದ ಪರವಾಗಿ ಇಂಥ ಸಂತರ ಆತ್ಮಗಳಿಗೆ ಮತ್ತೊಮ್ಮೆ ಶ್ರದ್ಧಾಂಜಲಿ ಸಲ್ಲಿಸುತ್ತೇನೆ. ರಾಮಕೃಷ್ಣ ಮಿಷನ್‌ಗೆ ಸಂಬಂಧಿಸಿದ ಎಲ್ಲಾ ಜನರು ಅವರು ತೋರಿಸಿದ ಹಾದಿಯಲ್ಲಿ ಮುಂದೆ ಸಾಗುತ್ತಾರೆ ಎಂಬ ವಿಶ್ವಾಸ ನನಗಿದೆ.

ಓಂ ಶಾಂತಿ.

(ಲೇಖಕರು ಭಾರತದ ಪ್ರಧಾನಮಂತ್ರಿಗಳು)

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಕಾಂಚಾಣದ ಕುಣಿತ!

ಲೋಕಸಭಾ ಚುನಾವಣೆಯು ದಿನದಿನಕ್ಕೂ ಕಾವು ಪಡೆದುಕೊಳ್ಳುತ್ತಿದ್ದಂತೆ, ಲಾರಿ, ಕಾರು, ದ್ವಿಚಕ್ರ ವಾಹನಗಳು ಅಷ್ಟೇಕೆ ಸಾರಿಗೆ ಬಸ್ಸುಗಳಲ್ಲೂ ಕಂತೆ ಕಂತೆ ಹಣ ಪತ್ತೆಯಾಗುತ್ತಿದೆ. ಅದು ಎಲ್ಲಿಂದ ಬಂತು, ಎಲ್ಲಿಗೆ ಹೋಯಿತು ಎಂಬ ಬಗ್ಗೆ ಯಾರೂ ಬಾಯಿಬಿಡುತ್ತಿಲ್ಲ. ಇದನ್ನು ಅಕ್ರಮ ಹಣವೆಂದು ಚುನಾವಣಾ ಆಯೋಗವು ವಶಪಡಿಸಿಕೊಳ್ಳುತ್ತದೆ. ನಂತರ ಆ ಹಣದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯೇ ಇರುವುದಿಲ್ಲ. ಇಲ್ಲೊಂದು ಪುಟ್ಟ ಪ್ರಶ್ನೆ: ಚಿಕ್ಕ ಕಲ್ಲೆಸೆತದ ಪ್ರಸಂಗದಿಂದ ಮೊದಲ್ಗೊಂಡು ಅತ್ಯಂತ ಜಾಣತನದಿಂದ ನಿರ್ವಹಿಸಿದ ಕೊಲೆಯವರೆಗಿನ ಅನೇಕ ಪ್ರಕರಣಗಳನ್ನೂ, ಬಾಂಬ್ ಬ್ಲಾಸ್ಟ್ ಪ್ರಸಂಗದ ಸಂಚುಕೋರರನ್ನೂ ನಮ್ಮ ಬುದ್ಧಿವಂತ ತನಿಖಾದಳ ಪತ್ತೆ ಹಚ್ಚುತ್ತದೆ. ಕೆಫೆಯೊಂದರಲ್ಲಿ ಸುಳಿದಾಡಿ ಕ್ಷಣಮಾತ್ರದಲ್ಲಿ ಬಾಂಬ್ ಇಟ್ಟು ಮಾಯವಾದ ವ್ಯಕ್ತಿಯ ಪತ್ತೆ ಇನ್ನೇನು ಆಗಲಿದೆ. ಆದರೆ, ಅಕ್ರಮ ಹಣದ ಮೂಲವನ್ನೇಕೆ ಅದು ಪತ್ತೆಮಾಡಲಾಗುತ್ತಿಲ್ಲ? ಅಕ್ರಮ ಹಣವನ್ನು ಸಾಗಿಸುತ್ತಿರುವ ವಾಹನ ಚಾಲಕರಿಗೆ, ಅದು ಎಲ್ಲಿಂದ ಹೊರಟಿತು, ಎಲ್ಲಿಗೆ ತಲುಪುವುದಿತ್ತು, ಅದನ್ನು ವಾಹನದಲ್ಲಿ ಇರಿಸಿದವರು ಯಾರು ಎಂಬೆಲ್ಲ ಸಂಗತಿಗಳು ತಿಳಿದಿರುವುದಿಲ್ಲವೇ? ಇಂಥ ಸಣ್ಣ ಅಂಶಗಳನ್ನು ಹಿಡಿದುಕೊಂಡು ಪಟ್ಟಾಗಿ ತನಿಖೆಗಿಳಿದರೆ ಅಕ್ರಮ ಹಣದ ವಾರಸುದಾರರನ್ನು ಪತ್ತೆಹಚ್ಚುವುದು ಕಷ್ಟವಾಗಲಾರದು. ದೇಶದ ಅಭದ್ರತೆಗೆ ಕಾರಣವಾಗುವ ಕುಕೃತ್ಯದಂತೆ ಚುನಾವಣಾ ಅವ್ಯವಹಾರವೂ ಜನದ್ರೋಹಿ ಕೆಲಸವೇ. ಇದನ್ನು ಮಟ್ಟಹಾಕುವ ಹೊಣೆಗಾರಿಕೆಯನ್ನು ‘ಎನ್‌ಐಎ’ಯಂಥ ಸಂಸ್ಥೆಗೆ ವಹಿಸಿ, ಆಮೂಲಾಗ್ರವಾಗಿ ಜಾಲಾಡಿಸಿ, ಅಕ್ರಮ ಹಣದ ಮೂಲ ಹಾಗೂ ಅದು ಯಾರಿಗೆ ತಲುಪಬೇಕಿತ್ತು ಎಂಬುದನ್ನು ಪತ್ತೆಹಚ್ಚಿಸಿ, ಆಯಾ ಅಭ್ಯರ್ಥಿಯನ್ನು ಚುನಾವಣಾ ಸ್ಪರ್ಧೆಗೆ ಅನರ್ಹಗೊಳಿಸಿದರೆ, ಚುನಾವಣೆ ಪಾರದರ್ಶಕವಾಗಿ ನಡೆದೀತು ಮತ್ತು ಪ್ರಾಮಾಣಿಕರು ಚುನಾಯಿಸಲ್ಪಟ್ಟು ಪ್ರಜಾಪ್ರಭುತ್ವ ವಿಜೃಂಭಿಸೀತು.

- **ಸತ್ಯಬೋಧ** ಬೆಂಗಳೂರು

### ಶೋಭೆ ತರುವುದಿಲ್ಲ

ಕೆಲ ರಾಜಕಾರಣಿಗಳು ಇತ್ತೀಚಿನ ದಿನಗಳಲ್ಲಿ ನಾಲಗೆಯನ್ನು ಮನಬಂದಂತೆ ಹರಿಬಿಡುವುದು ಹೆಚ್ಚಾಗುತ್ತಿದೆ. ಅದರಲ್ಲೂ ನಿರ್ದಿಷ್ಟವಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯ ಬಗ್ಗೆ ಹಗುರವಾಗಿ ಮಾತನಾಡಿ ನಂತರ ಸಮಜಾಯಿಷಿ ನೀಡುವುದು ಕೆಲವರ ಚಾಳಿಯಾಗಿಬಿಟ್ಟಿದೆ. ಇಂಥ ಲಘು ಹೇಳಿಕೆಗಳನ್ನು ಇತರೆ ನಾಯಕರೂ ಸಮರ್ಥಿಸಿಕೊಳ್ಳುವುದು ವಿಷಾದನೀಯ. ಸಮಾಜದ ಶಾಂತಿ ಕದಡುವ ಮಾತುಗಳನ್ನಾಡುವುದು ನಮ್ಮನ್ನಾಳುವ ನಾಯಕರ ಘನತೆಗೆ ಶೋಭೆ ತರುವುದಿಲ್ಲ. ‘ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು’ ಎಂಬ ಗಾದೆಯಂತೆ, ಒಮ್ಮೆ ಆಡಿದ ಮಾತುಗಳು ಜನರ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಉಳಿದುಬಿಡುತ್ತವೆ. ಸಂಬಂಧಪಟ್ಟವರು ನಂತರ ಅದನ್ನು ಸಮರ್ಥಿಸಿಕೊಂಡರೂ ಏನೂ ಪ್ರಯೋಜನಕ್ಕೆ ಬರುವುದಿಲ್ಲ. ರಾಜಕಾರಣಿಗಳು ಈ ಸೂಕ್ಷ್ಮವನ್ನು ಗಮನದಲ್ಲಿಟ್ಟುಕೊಂಡು ಇನ್ನಾದರೂ ಎಚ್ಚರಿಕೆಯಿಂದ ಮಾತನಾಡಲಿ.

- **ಜಿ.ನಾಗೇಂದ್ರ ಕಾವೂರು** ಸಂಡೂರು